# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | 2109 |
| **ಸದಸ್ಯರ ಹೆಸರು** | : | ಶ್ರೀ ಪಿ.ಆರ್. ರಮೇಶ್ (ನಾಮ ನಿರ್ದೇಶನ ಹೊಂದಿದವರು) |
| **ಉತ್ತರಿಸಬೇಕಾದ ದಿನಾಂಕ** | : | 17-03-2022 |
| **ಉತ್ತರಿಸುವ ಸಚಿವರು** | : | ಗೃಹ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ನಗರದಲ್ಲಿ ಇರುವ ಹುಕ್ಕಾ ಬಾರ್, ಡ್ಯಾನ್ಸ್ ಬಾರ್, ಕ್ಯಾಸಿನೋ, ರಿಕ್ರಿಯೇಷನಲ್ ಕ್ಲಬ್‌ಗಳ ಸಂಖ್ಯೆ ಎಷ್ಟು (ವಿವರ ನೀಡುವುದು) | ಹುಕ್ಕಾ ಬಾರ್ ನಡೆಸಲು ಅನುಮತಿಯನ್ನು ಬಿ.ಬಿ.ಎಂ.ಪಿ ಯಿಂದ ಟ್ರೇಡ್ ಲೈಸನ್ಸ್ ಪಡೆದು ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದು, ಬೆಂಗಳೂರು ಪೊಲೀಸ್ ವತಿಯಿಂದ ಹುಕ್ಕಾ ಬಾರ್ ನಡೆಸಲು ಪರವಾನಗಿ ವ್ಯವಸ್ಥೆ ಇರುವುದಿಲ್ಲ ಮತ್ತು ರಿಕ್ರಿಯೇಷನ್ ಕ್ಲಬ್‌ಗಳಿಗೆ ರಿಜಿಸ್ಟ್ರಾರ್, ಸಹಕಾರ ಸಂಘ ಇಲಾಖಾ ವತಿಯಿಂದ ಪರವಾನಗಿ ಪಡೆದು, ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಕಾರ್ಯನಿರ್ವಹಿಸುತ್ತಿವೆ.<br><br>ಬೆಂಗಳೂರು ನಗರದ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಯಾವುದೇ ಡ್ಯಾನ್ಸ್ ಬಾರ್ ಮತ್ತು ಕ್ಯಾಸಿನೋಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲ ಹಾಗೂ ಈ ಬಗ್ಗೆ ಪೊಲೀಸ್ ಇಲಾಖೆಯಿಂದ ಯಾವುದೇ ಅನುಮತಿ ಮತ್ತು ಎನ್.ಓ.ಸಿ ಯನ್ನು ನೀಡಲಾಗುತ್ತಿರುವುದಿಲ್ಲ. |
| ಆ | ಬೆಂಗಳೂರು ನಗರದಲ್ಲಿ ಇರುವ ಹುಕ್ಕಾ ಬಾರ್, ಡ್ಯಾನ್ಸ್ ಬಾರ್, ಕ್ಯಾಸಿನೋ, ರಿಕ್ರಿಯೇಷನಲ್ ಕ್ಲಬ್‌ಗಳ ಪೈಕಿ ಒಟ್ಟು ಎಷ್ಟು ಸಂಖ್ಯೆ ಅಧಿಕೃತವಾಗಿ ಕಾರ್ಯನಿರ್ವಹಿಸುತ್ತಿವೆ; (ವಿವರ ನೀಡುವುದು) ಮತ್ತು ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ಸಂಖ್ಯೆ ಎಷ್ಟು (ವಿವರ ನೀಡುವುದು) | ಬಿ.ಬಿ.ಎಂ.ಪಿ ಮತ್ತು ರಿಜಿಸ್ಟ್ರಾರ್, ಸಹಕಾರ ಸಂಘ ಇಲಾಖೆಯ ಅನುಮತಿಯ ಮೇರೆಗೆ ಮತ್ತು ಮಾನ್ಯ ಉಚ್ಚನ್ಯಾಯಾಲಯದ ಆದೇಶದ ಮೇರೆಗೆ, ಬೆಂಗಳೂರು ನಗರದ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹುಕ್ಕಾಬಾರ್ ಮತ್ತು ರಿಕ್ರಿಯೇಷನಲ್ ಕ್ಲಬ್‌ಗಳ ಬಗ್ಗೆ ಸ್ಥಳೀಯ ಪೊಲೀಸರ ವರದಿ ಆಧಾರದ ಮೇರೆಗೆ ಅಂಕಿಅಂಶಗಳ ಮಾಹಿತಿಯನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.<br><br>**ಹುಕ್ಕಾ ಬಾರ್**: **68**<br>**ರಿಕ್ರಿಯೇಷನಲ್ ಕ್ಲಬ್**: **49**<br><br>ಬೆಂಗಳೂರು ನಗರದ ಪೊಲೀಸ್ ಠಾಣಾ ಸರಹದ್ದಿನಲ್ಲಿ ಯಾವುದೇ ಡಾನ್ಸ್ ಬಾರ್ ಮತ್ತು ಕ್ಯಾಸಿನೋಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲ. |

<table>
<tr><td>ಇ</td><td>ಬೆಂಗಳೂರು ನಗರದಲ್ಲಿ ಇರುವ ಹುಕ್ಕಾ ಬಾರ್, ಡ್ಯಾನ್ಸ್ ಬಾರ್, ಕ್ಯಾಸಿನೋ, ರಿಕ್ರಿಯೇಷನಲ್ ಕ್ಲಬ್‌ಗಳಲ್ಲಿ ಸರ್ಕಾರದ ನಿಯಮಾವಳಿಗಳ ವಿರುದ್ಧ ಕಾರ್ಯನಿರ್ವಹಿಸುತ್ತಿರುವ ಕುರಿತು ಸರ್ಕಾರಕ್ಕೆ ಸಲ್ಲಿಕೆಯಾಗಿರುವ ದೂರುಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) ಮತ್ತು ಈ ಕುರಿತು ಸರ್ಕಾರದ ಕ್ರಮವೇನು; (ವಿವರ ನೀಡುವುದು)</td><td>ಬೆಂಗಳೂರು ನಗರದ ಪೊಲೀಸ್ ಠಾಣಾ ಸರಹದ್ದುಗಳಲ್ಲಿ ಸರ್ಕಾರದ ನಿಯಮಗಳ ವಿರುದ್ಧ ಅನಧಿಕೃತವಾಗಿ ಪರವಾನಗಿಯನ್ನು ಉಲ್ಲಂಘಿಸಿ ಕಾರ್ಯನಿರ್ವಹಿಸುತ್ತಿದ್ದ ಹುಕ್ಕಾ ಬಾರ್ ಮತ್ತು ರಿಕ್ರಿಯೇಷನ್ ಕ್ಲಬ್‌ಗಳ ವಿರುದ್ಧ ದಾಳಿ ನಡೆಸಿ ದಾಖಲಿಸಲಾದ ಪ್ರಕರಣಗಳ ಅಂಕಿ ಅಂಶಗಳ ವಿವರ ಈ ಕೆಳಕಂಡಂತೆ ವಿವರಿಸಲಾಗಿದೆ.
<table>
<tr><th>ಕ್ರ.ಸ.</th><th>ವರ್ಷ</th><th>ಹುಕ್ಕಾ ಬಾರ್ ವಿರುದ್ಧ ಕೋಟ್ಪಾ ಕಾಯ್ದೆ ಅಡಿ ದಾಖಲಿಸಲಾದ ಪ್ರಕರಣಗಳ ಸಂಖ್ಯೆ:</th><th>ರಿಕ್ರಿಯೇಷನ್ ಕ್ಲಬ್ ವಿರುದ್ಧ ದಾಳಿ ನಡೆಸಿ ದಾಖಲಿಸಲಾದ ಪ್ರಕರಣಗಳ ಸಂಖ್ಯೆ:</th></tr>
<tr><td>1</td><td>2020</td><td>10</td><td>63</td></tr>
<tr><td>2</td><td>2021</td><td>25</td><td>33</td></tr>
<tr><td>3</td><td>2022</td><td>5</td><td>4</td></tr>
</table></td></tr>
<tr><td>ಈ</td><td>ಈ ಪೈಕಿ ಅನೇಕ ಕಡೆ ಶಾಲಾ ಮಕ್ಕಳೂ ಸಹ ಹುಕ್ಕಾ ಬಾರ್, ಕ್ಯಾಸಿನೋ ಮತ್ತು ಇತರೆ ಕಡೆಗಳಲ್ಲಿ ನಿಯಮಬಾಹಿರವಾಗಿ ಪಾಲ್ಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು; (ವಿವರ ನೀಡುವುದು)</td><td>ಹುಕ್ಕಾ ಬಾರ್ ಮತ್ತು ರಿಕ್ರಿಯೇಷನಲ್ ಕ್ಲಬ್‌ಗಳಲ್ಲಿ ಶಾಲಾ ಮಕ್ಕಳು ಪಾಲ್ಗೊಳ್ಳುತ್ತಿರುವುದು ಕಂಡುಬಂದಲ್ಲಿ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುವುದು.</td></tr>
<tr><td>ಉ</td><td>ಸದರಿ ವಿಷಯವು ಸ್ಥಳೀಯ ಆರಕ್ಷಕ ಠಾಣೆಗೂ ಗೊತ್ತಿದ್ದರೂ ಸಹ ಅಧಿಕಾರಿಗಳು ಏನೂ ಗೊತ್ತಿಲ್ಲದಂತೆ ಪ್ರದರ್ಶಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)</td><td>ಅನಧಿಕೃತವಾಗಿ ಸರ್ಕಾರಿ ನಿಯಮಗಳನ್ನು ಪಾಲಿಸದವರ ವಿರುದ್ಧ ಹಾಗೂ ಪರವಾನಗಿಯನ್ನು ಉಲ್ಲಂಘಿಸುವವರ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುತ್ತಿದ್ದು, ಈ ಬಗ್ಗೆ ಸ್ಥಳೀಯ ಅಧಿಕಾರಿಗಳಿಗೆ ಸೂಕ್ತ ಸೂಚನೆಗಳನ್ನು ಸಹ ನೀಡಲಾಗಿರುತ್ತದೆ.</td></tr>
</table>

**ಸಂಖ್ಯೆ:ಹೆಚ್‌ಡಿ 123 ಎಸ್‌ಎಸ್‌ಟಿ 2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು